# ಜೀವವೈವಿಧ್ಯ ವಾರ್ತಾಪತ್ರ

# BIODIVERSITY NEWS LETTER


## ಕರ್ನಾಟಕ ಜೀವವೈವಿಧ್ಯ ಮಂಡಳಿ

(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ)
ನೆಲಮಹಡಿ, ವನ ವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

ಸಂಪುಟ – 01 ಸಂಚಿಕೆ – 04 ISSN 0975 - 1289 ಆಕ್ಟೋಬರ್ 2019 – ಮಾರ್ಚ್ 2020




**ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡ್ಯೂರಪ್ಪನವರೊಂದಿಗೆ ತಜ್ಞರ ನಿಯೋಗದ ಭೆಟ್ಟಿ**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು, ವಿಜ್ಞಾನಿಗಳು ಹಾಗೂ ವಿವಿಧ ಕ್ಷೇತ್ರಗಳ ತಜ್ಞರಿದ್ದ ಉನ್ನತ ನಿಯೋಗದೊಂದಿಗೆ ಫೆಬ್ರವರಿ ತಿಂಗಳಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡ್ಯೂರಪ್ಪನವರನ್ನು ಭೆಟ್ಟಿಯಾಗಿದ್ದರು. ಜೀವವೈವಿಧ್ಯ ಸಂರಕ್ಷಣೆ ಆಧಾರಿತ ವಿವಿಧ ಬಗೆಯ ಸುಸ್ಥಿರ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಕುರಿತಂತೆ ಅವರೊಂದಿಗೆ ಚರ್ಚಿಸಲಾಯಿತು. ಮುಂಬರುವ ವರ್ಷದ ಬಜೆಟ್ಟಿನಲ್ಲಿ ಈ ಕುರಿತು ಕೆಲವು ನಿರ್ದಿಷ್ಟ ಕಾರ್ಯಯೋಜನೆಗಳನ್ನು ಕೈಗೊಳ್ಳುವಂತೆ ಮನವಿ ಸಲ್ಲಿಸಲಾಯಿತು.



**ಸನ್ಮಾನ್ಯ ನೂತನ ಅರಣ್ಯ ಮತ್ತು ಪರಿಸರ ಸಚಿವರಿಗೆ ಸುಸ್ವಾಗತ**

ಕರ್ನಾಟಕ ಸರ್ಕಾರದ ನೂತನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿರುವ **ಶ್ರೀ ಆನಂದ ಸಿಂಗ್** ಅವರಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಗೌರವಪೂರ್ವಕವಾಗಿ ಹಾರ್ದಿಕ ಸ್ವಾಗತ ಬಯಸುತ್ತದೆ.



**ಪ್ರೊ. ಎಮ್.ಎಸ್. ಸ್ವಾಮಿನಾಥನ್ ಭೇಟಿ**

ಮಂಡಳಿಯ ಅಧ್ಯಕ್ಷರು ದಿ. 28 ನವೆಂಬರ್ 2019ರಂದು, ಚೆನ್ನೈನ ಎಮ್.ಎಸ್. ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯಲ್ಲಿ ದೇಶದ ಬಹು ಗೌರವಾನ್ವಿತ ಕೃಷಿ ವಿಜ್ಞಾನಿಯಾದ ಪ್ರೊ. ಎಮ್.ಎಸ್. ಸ್ವಾಮಿನಾಥನ್ ಅವರನ್ನು ಭೆಟ್ಟಿಯಾಗಿ ಚರ್ಚೆ ನಡೆಸಿದರು.

## ಅಧ್ಯಕ್ಷರ ನುಡಿ



ನಮಸ್ಕಾರ.

ಕರ್ನಾಟಕ ಜೀವವೈವಿಧ್ಯ ಮಂಡಳಿಯು ನಾಡಿನ ನೆಲ–ಜಲ ಸೇರಿದಂತೆ ಸಕಲ ಜೈವಿಕ ಸಂಪನ್ಮೂಲಗಳನ್ನು ಸಂರಕ್ಷಿಸುವ ಉದ್ದೇಶದ ಸಾಂವಿಧಾನಿಕ ಸಂಸ್ಥೆ. ಇದರ ಅಧ್ಯಕ್ಷಸ್ಥಾನಕ್ಕೆ ಕರ್ನಾಟಕ ಸರ್ಕಾರವು ನನ್ನನ್ನು ನಿಯುಕ್ತಿಗೊಳಿಸಿದೆ. ನನ್ನ ಕೃರ್ತತ್ವ ಶಕ್ತಿಯಲ್ಲಿ ವಿಶ್ವಾಸವಿರಿಸಿ ಈ ಜವಾಬ್ದಾರಿ ನೀಡಿದ ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಿ.ಎಸ್. ಯಡ್ಯೂರಪ್ಪನವರಿಗೆ ಹಾರ್ದಿಕ ಕೃತಜ್ಞತೆಗಳು.** ಕಳೆದ ಆರು ತಿಂಗಳಿಂದ ಈ ಜವಾಬ್ದಾರಿ ನಿರ್ವಹಿಸಲು ಮಾರ್ಗದರ್ಶನ ಹಾಗೂ ಸಹಕಾರ ನೀಡುತ್ತಿರುವ ಮಾನ್ಯ ಅರಣ್ಯ ಮತ್ತು ಪರಿಸರ ಸಚಿವಾಲಯದ ಮಾನ್ಯ ಮಂತ್ರಿಗಳು, ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಧನ್ಯವಾದಗಳು. ಕೋವಿಡ್–19 ರೋಗ ತಂದ ಸಂಕಷ್ಟದ ನಡುವೆಯೂ ತನ್ನ ಇತಿಮಿತಿಯಲ್ಲಿ, ಕಳೆದ ಆರು ತಿಂಗಳಲ್ಲಿ ಮಂಡಳಿಯು ವಿವಿಧ ಆಯಾಮಗಳಲ್ಲಿ ಅನೇಕ ಚಟುವಟಿಕೆಗಳನ್ನು ಕೈಗೊಂಡಿದೆ. ಅವನ್ನಿಲ್ಲಿ ಸಂಗ್ರಾಹ್ಯವಾಗಿ ನೀಡುವ ಪ್ರಯತ್ನ ಮಾಡಿದ್ದೇವೆ.

ರಾಷ್ಟ್ರಮಟ್ಟದಲ್ಲಿ ಜಾರಿಗೆ ಬಂದಿರುವ ಜೀವವೈವಿಧ್ಯ ಕಾಯ್ದೆಯ(2002) ಅನ್ವಯ 2003ರ ಅಗಸ್ಟ್ ಒಂದರಿಂದ ಕಾರ್ಯಾರಂಭ ಮಾಡಿದ ರಾಜ್ಯ ಸರ್ಕಾರದ ಸಂಸ್ಥೆಯಿದು. ರಾಜ್ಯದ ಕಾಡು–ಕಣಿವೆ, ಕೃಷಿಭೂಮಿ–ಗೋಮಾಳ,ನದಿ–ಕೆರೆಗಳು, ಸಮುದ್ರ ಸೇರಿದಂತೆ ಎಲ್ಲೆಡೆ ಇರುವ ಅಸಂಖ್ಯ ಬಗೆಯ ಸಸ್ಯ ಹಾಗೂ ಪ್ರಾಣಿ ಸಂಕುಲಗಳು ಮತ್ತು ಅವುಗಳ ತಳಿವೈವಿಧ್ಯವನ್ನು ಸಂರಕ್ಷಿಸುವ ಯೋಜನೆಗಳನ್ನು ವಿವಿಧ ಇಲಾಖೆಗಳ ಸಹಯೋದೊಂದಿಗೆ ರೂಪಿಸುವ ಹೊಣೆ ಮಂಡಳಿಗಿದೆ. ಹೀಗಾಗಿ, ನಾಡಿನ ಎಲ್ಲ ಜೀವಸಂಕುಲಗಳನ್ನು ರಕ್ಷಿಸುವದು ಮತ್ತು ಅವುಗಳನ್ನು ಮಿತವಾಗಿ ಬಳಸುವ ಕುರಿತಂತೆ ಹಂತ ಹಂತವಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಸರ್ಕಾರದ ಮಟ್ಟದಲ್ಲಿ ನೀತಿ ನಿರೂಪಣೆಯಿಂದ ತೊಡಗಿ, ಇಲಾಖೆಗಳ ಜೊತೆ ಸೇರಿ ಯೋಜನೆಗಳನ್ನು ರೂಪಿಸಿವದು, ಇಲಾಖೆಗಳ ಜಿಲ್ಲಾಮಟ್ಟದ ವಿಭಾಗಳ ಸಹಯೋಗದಲ್ಲಿ ಅನುಷ್ಠಾನಗೊಳಿಸುವದು, ತಳಮಟ್ಟದಲ್ಲಿ ಪಂಚಾಯತ ರಾಜ್ ಸಂಸ್ಥೆಗಳು ಸೇರಿದಂತೆ ಜನಸಮೂದಾಯದ ಸಹಭಾಗಿತ್ವದೊಂದಿಗೆ ಜೀವವೈವಿಧ್ಯ ಸಂರಕ್ಷಣೆ ಉದ್ದೇಶಗಳನ್ನು ಕಾರ್ಯಗತಗೊಳಿಸಿವದು– ಈ ಎಲ್ಲ ನಿಟ್ಟಿನಲ್ಲಿ ಮಂಡಳಿಯ ಚಟುವಟಿಕೆಗಳು ಸಾಗಿವೆ. ಕೋವಿಡ್– 19 ರೋಗ ಪಸರಿಸಿರುವ ಹಿನ್ನೆಲೆಯಲ್ಲಿ, ಜೀವವೈವಿದ್ಯ ಸಂರಕ್ಷಣೆಯ ಮಹತ್ವದ ಕುರಿತು ವ್ಯಾಪಕ ತಜ್ಞಚರ್ಚೆ ದೇಶದಾದ್ಯಂತ ಸಾಗಿದೆ. ಅವನ್ನು ಮಂಡಳಿಯು ಗಮನಿಸುತ್ತಿದ್ದು, ರಾಜ್ಯಕ್ಕೆ ಸೂಕ್ತವಾದ ಅಂಶಗಳನ್ನು ಅಳವಡಿಸಿಕೊಳ್ಳುವದರತ್ತ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಚಿಂತನೆ ಕೂಡಾ ನಡೆದಿದೆ.

ತನ್ನ ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ರಾಷ್ಟ್ರೀಯ ಜೀವವೈವಿಧ್ಯತಾ ಪ್ರಾಧಿಕಾರದಿಂದ ದೇಶದಲ್ಲೇ ಉತ್ಕೃಷ್ಟ ಮಂಡಳಿ ಎಂದು ಪುರಸ್ಕಾರ ಪಡೆದ ಹೆಗ್ಗಳಿಕೆ ನಮ್ಮ ರಾಜ್ಯದ ಮಂಡಳಿಗಿದೆ. ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕಾರ್ಯಸಾಧನೆ ಮಾಡಲು ಸಾರ್ವಜನಿಕರೆಲ್ಲರ ಸಹಕಾರ ಮತ್ತು ಸಹಭಾಗಿತ್ವವನ್ನು ಕೋರುತ್ತೇನೆ. ತಮಗೆಲ್ಲ ಮಾಹಿತಿ ನೀಡುವ ಉದ್ದೇಶದಿಂದಲೇ ಪ್ರಕಟಗೊಳ್ಳುತ್ತಿರುವ ಈ ವಾರ್ತಾಪತ್ರದ ಉದ್ದೇಶ ಸಫಲವಾಗುತ್ತದೆ ಎಂದು ಭಾವಿಸುತ್ತೇನೆ. ಮಂಡಳಿಯ ಎಲ್ಲ ಕಾರ್ಯಗಳಲ್ಲಿ ಸದಾ ಸಹಕಾರ ನೀಡುತ್ತಿರುವ ಮಾನ್ಯ ಸದಸ್ಯ ಕಾರ್ಯದರ್ಶಿಗಳು, ಅಧಿಕಾರಿವರ್ಗ ಹಾಗೂ ಎಲ್ಲ ಸಿಬ್ಬಂಧಿಗಳಿಗೆ ನನ್ನ ಹಾರ್ದಿಕ ಧನ್ಯವಾದಗಳು. ಈ ವಾರ್ತಾಪತ್ರವನ್ನು ಅಚ್ಚುಕಟ್ಟಾಗಿ ಹೊರತಂದ ಸಂಪಾದಕ ಮಂಡಳಿಯ ಎಲ್ಲರಿಗೆ ಕೃತಜ್ಞತೆಗಳು.

**ಅನಂತ ಹೆಗಡೆ ಅಶೀಸರ**
ಅಧ್ಯಕ್ಷರು
ಕರ್ನಾಟಕ ಜೀವವೈವಿಧ್ಯ ಮಂಡಳಿ

## ಸಂಪಾದಕರ ನುಡಿ

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಜವಾಬ್ದಾರಿಯು ಹಲವು ಮುಖಗಳದ್ದು ಎನ್ನಬಹುದು. ನಾಡಿನ ಜೀವಸಂಕುಲಗಳನ್ನು ಗುರುತಿಸಿ ಜನರ ಸಹಭಾಗಿತ್ವದೊಂದಿಗೆ ದಾಖಲಿಸುವದು, ಪಂಚಾಯತ ರಾಜ ಸಂಸ್ಥೆಗಳ ನೇತೃತ್ವದಲ್ಲಿ ತಳಮಟ್ಟದಲ್ಲಿ ಅವನ್ನು ಸಂರಕ್ಷಿಸುವದು, ನೈಸರ್ಗಿಕ ಸಂಪನ್ಮೂಲಗಳನ್ನು ಹಿತಮಿತವಾಗಿ ಬಳಸುವ ವಿಧಾನಗಳನ್ನು ಜಾರಿಗೆ ತರುವದು, ವಾಣಿಜ್ಯಕ ಉದ್ದೇಶಕ್ಕಾಗಿ ಜೈವಿಕ ಸಂಪನ್ಮೂಲಗಳನ್ನು ಬಳಸಿದಾಗ ದೊರಕುವ ಲಾಭಾಂಶದಲ್ಲಿ ಒಂದು ಪಾಲನ್ನು, ಅವನ್ನು ಸಂರಕ್ಷಿಕೊಂಡು ಬಂದ ಸಮುದಾಯಗಳಿಗೂ ದೊರಕುವಂತೆ ಮಾಡುವದು– ಈ ಎಲ್ಲ ಕಾರ್ಯಗಳು ಇದರಲ್ಲಿ ಸೇರಿವೆ. ಮಂಡಳಿಯು ಈ ಎಲ್ಲ ಕಾರ್ಯಗಳನ್ನು ಹಲವು ಆಯಾಮಗಳಲ್ಲಿ ಕೈಗೊಳ್ಳುತ್ತಿದೆ. ಸರ್ಕಾರದ ಮಟ್ಟದಲ್ಲಿ ಯೋಜನೆ ರೂಪಿಸುವದರಿಂದ ತೊಡಗಿ, ಗ್ರಾಮಮಟ್ಟದಲ್ಲಿ ಅವನ್ನು ಅನುಷ್ಠಾನಗೊಳಿಸುವವರೆಗೆ ವಿವಿಧ ಹಂತಗಳಲ್ಲಿ ಈ ಕೆಲಸಗಳನ್ನು ಮಾಡುತ್ತಿದೆ. ಕಳೆದ ಅಕ್ಟೋಬರ್ 2019 ರಿಂದ ಮಾರ್ಚ 2020ರ ವರೆಗಿನ ಆರು ತಿಂಗಳ ಅವಧಿಯಲ್ಲಿ, ಮಂಡಳಿಯು ನಡೆಸಿದ ಕಾರ್ಯಚಟುವಟಿಕೆಗಳ ವರದಿ ಈ ವಾರ್ತಾಪತ್ರದಲ್ಲಿದೆ. ನಾಡಿನ ಜೀವಸಂಕುಲಗಳ ಸಂರಕ್ಷಣೆಯತ್ತ ಇನ್ನೂ ಹೆಚ್ಚಿನ ಅರಿವು ಹಾಗೂ ಜಾಗೃತಿ ಮೂಡಿಸಲು ಈ ಮಾಹಿತಿಗಳು ಪೂರಕವಾಗಲಿ ಎಂಬ ಆಶಯ ನಮ್ಮದು. ಈ ವಾರ್ತಾಪತ್ರದಲ್ಲಿ ಈ ಕೆಳಗಿನ ವಿಷಯಗಳಿಗೆ ಆದ್ಯತೆ ನೀಡಲಾಗಿದೆ..

1. ಜೀವವೈವಿಧ್ಯ ಮಂಡಳಿಯ ಆಡಳಿತ ಮಂಡಳಿಯ ಸಭೆಯ ವಿವರ.
2. ವಿಶೇಷ ಸಾಧನೆಗಳ ಪರಿಚಯ.
3. ಮಂಡಳಿಯ ವಿಶೇಷ ಕಾರ್ಯಟುವಟಿಕೆಗಳ ವರದಿ.
4. ತಳಮಟ್ಟದಲ್ಲಿ ಕೈಗೊಂಡ ಜೀವವೈವಿಧ್ಯ ಸಂರಕ್ಷಣೆ ಕಾರ್ಯಗಳು
5. ಜೀವವೈವಿಧ್ಯದ ಸಂಶೋಧನೆ ಹಾಗೂ ಮಾಹಿತಿ ಪ್ರಸರಣೆ.

ಈ ವಾರ್ತಾಪತ್ರದ ಪ್ರಕಟಣೆಯಲ್ಲಿ ಸಂಪೂರ್ಣ ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಮಂಡಳಿಯ ಸನ್ಮಾನ್ಯ ಅಧ್ಯಕ್ಷರು, ಮಾನ್ಯ ಸದಸ್ಯ ಕಾರ್ಯದರ್ಶಿಗಳು, ಅಧಿಕಾರಿಗಳು ಹಾಗೂ ಸಿಬ್ಬಂಧಿಗಳಿಗೆ, ಈ ವಾರ್ತಾಪತ್ರದ ಸಂಪಾದಕ ಮಂಡಳಿಯ ಹಾರ್ದಿಕ ಧನ್ಯವಾದಗಳು.

– ಸಂಪಾದಕ ಮಂಡಳಿ



## ಸದಸ್ಯ ಕಾರ್ಯದರ್ಶಿಯವರಿಗೆ ಪದೋನ್ನತಿ : ಅಭಿನಂದನೆ

ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾದ **ಡಾ. ವೀರೇಂದರ್ ಸಿಂಗ್** (ಭಾ.ಅ.ಸೇ.) ಇವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ ಇತ್ತೀಚೆಗೆ ಪದೋನ್ನತಿ ಹೊಂದಿದ್ದಾರೆ. 1987ರಲ್ಲಿ ಭಾರತೀಯ ಅರಣ್ಯ ಸೇವೆಗೆ ಸೇರಿದ ಅವರಿಗೆ, ಅರಣ್ಯ ಸಂರಕ್ಷಣಾ ಕಾರ್ಯದಲ್ಲಿ ಸುಮಾರು ಮೂವತ್ಮೂರು ವರ್ಷಗಳ ದೀರ್ಘ ಅನುಭವವಿದೆ. ಜುಲೈ 2016ರಿಂದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಮಂಡಳಿಯ ಹಲವು ಯೋಜನೆಗಳನ್ನು ಅವರು ಯಶಸ್ವೀಯಾಗಿ ಅನುಷ್ಠಾನಗೊಳಿಸುತ್ತಿದ್ದಾರೆ. ಕಳೆದ 6ನೇ ಮೇ 2020ರಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಹುದ್ದೆಯಿಂದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾಗಿ ಪದೋನ್ನತಿ ಹೊಂದಿದ್ದು, ಮಂಡಳಿಯು ಅವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ.




**ರಾಷ್ಟ್ರೀಯ ಅವಘಡ ನಿಯಂತ್ರಣ ಪ್ರಾಧಿಕಾರವು ರಾಜ್ಯ ಸರ್ಕಾರದ ಸಹಯೋಗದಲ್ಲಿ ಸಂಘಟಿಸಿದ್ದ "ಬಿಸಿಗಾಳಿ ಪರಿಸ್ಥಿತಿ ನಿಯಂತ್ರಣ" ಕುರಿತ ರಾಷ್ಟ್ರೀಯ ಸಮಾಲೋಚನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರು ಭಾಗವಹಿಸಿದ್ದರು.**

**ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಹೈದರಾಬಾದಿನಲ್ಲಿ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರು ಭಾಗವಹಿಸಿ, ರಾ.ಜೀ.ಪ್ರಾ. ಅಧ್ಯಕ್ಷ ಡಾ. ಮಾಥೂರ್ ಅವರೊಂದಿಗೆ ಚರ್ಚಿಸಿದರು.**



## ಜೀವವೈವಿಧ್ಯ ಮಂಡಳಿಯ ಆಡಳಿತ ಮಂಡಳಿಯ ಸಭೆ

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಎಲ್ಲ ಕಾರ್ಯಚಟುವಟಿಕೆಗಳು ಸರ್ಕಾರದ ನಿಯಮಾವಳಿಗೆ ಅನುಗುಣವಾಗಿ ಕಾರ್ಯಗತವಾಗುತ್ತವೆ. ಇದರ ಅನ್ವಯ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಉಸ್ತುವಾರಿಯನ್ನು ಗಮನಿಸುವ ಜವಾಬ್ದಾರಿಯು ಮಂಡಳಿಯ ಉನ್ನಾತಾಧಿಕಾರದ ಸಮಿತಿಯಾದ ಆಡಳಿತ ಮಂಡಳಿಯದ್ದು. ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಜ್ಞ ಸದಸ್ಯರು ಇರುವ ಆಡಳಿತ ಮಂಡಳಿಯ ನಲವತ್ಮೂರನೇ ಸಭೆ, ದಿನಾಂಕ 31/01/2020ರಂದು ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಹಾಗೂ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಪರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂದೀಪ್ ದವೆ (ಭಾ.ಆ.ಸೇ.) ಅವರುಗಳ ಉಪಸ್ಥಿಯಲ್ಲಿ ಜರುಗಿತು. ಈ ಕೆಳಗಿನ ಕೆಲವು ಪ್ರಮುಖ ಅಂಶಗಳ ಕುರಿತು ಅಲ್ಲಿ ಚರ್ಚಿಸಿ, ಮುಂದಿನ ಸೂಕ್ತ ಹೆಜ್ಜೆಯಿಡಲು ನಿರ್ಧರಿಸಲಾಯಿತು.

- ರಾಜ್ಯದ ಸೂಕ್ತ ಸ್ಥಳವೊಂದರಲ್ಲಿ ವಿಸ್ತಾರವಾದ ಜೀವವೈವಿಧ್ಯ ವನ ನಿರ್ಮಿಸುವದು.
- ರಾಷ್ಟ್ರೀಯ ಹಸಿರು ನ್ಯಾಯಾಲಯದ ಆದೇಶದ ಅನ್ವಯ, ರಾಜ್ಯದ ಎಲ್ಲ ಗ್ರಾಮಗಳ ಪಂಚಾಯತ ರಾಜ್ ಸಂಸ್ಥೆಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿ, ಜನತಾ ಜೀವವೈವಿಧ್ಯ ದಾಖಲಾತಿ ಅಧ್ಯಯನಗಳನ್ನು ಕೈಗೊಳ್ಳುವ ಕಾರ್ಯವನ್ನು ಚುರುಕುಗೊಳಿಸಿ, ಶೀಘ್ರದಲ್ಲಿ ಸಂಪೂರ್ಣಗೊಳಿಸುವದು
- ಪಶ್ಚಿಮಘಟ್ಟದ ಅಮೂಲ್ಯ ಶೋಲಾ ಅರಣ್ಯದ ಸಂರಕ್ಷಣೆ ಉದ್ದೇಶದಿಂದ, ವಿಶೇಷ ಸಂಶೋಧನಾ ಅಧ್ಯಯನಕ್ಕೆ ಚಾಲನೆ ನೀಡುವದು.
- ನಾಡಿನ ಮೂಲಿಕಾ ಸಂಪತ್ತನ್ನು ವಾಣಿಜ್ಯಕವಾಗಿ ಬಳಸುತ್ತಿರುವ ಹಲವು ಉದ್ಯಮಗಳಲ್ಲಿ, ಕೆಲವು ಕಾನೂನುಬದ್ಧವಾಗಿ ಮಂಡಳಿಗೆ ತನ್ನ ಲಾಭಾಂಶದಲ್ಲಿ ಪಾಲನ್ನು ಸಂದಾಯ ಮಾಡಿವೆ. ಈ ಲಾಭವು ಆ ಸಂಪನ್ಮೂಲಗಳ ರಕ್ಷಣೆಯಲ್ಲಿ ತೊಡಗಿಸಿಕೊಂಡ ಸಮೂದಾಯಗಳಿಗೆ ದೊರಕುವಂತೆ ಸೂಕ್ತ ಕಾರ್ಯಕ್ರಮ ರೂಪಿಸುವದು.
- ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯಕ ಉದ್ದೇಶಗಳಿಗೆ ಬಳಸುವ ಉದ್ಯಮಗಳಿಗೆ ಪರವಾನಗಿ ಕೊಡುವ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಕ್ಷಮ ಪ್ರಾಧಿಕಾರಗಳ ನಿಯಮಾವಳಿಗಳಲ್ಲಿ, ಜೀವವೈವಿಧ್ಯ ಸಂರಕ್ಷಣಾ ಕಾನೂನಿನ ಅಂಶಗಳನ್ನೂ ಅಂತರ್ಗತಗೊಳಿಸುವ ಕಾರ್ಯವನ್ನು ಚುರುಕುಗೊಳಿಸುವದು.
- ಜೀವವೈವಿಧ್ಯ ಕಾನೂನಿನ ಆಶಯದಂತೆ, ರಾಜ್ಯದಲ್ಲಿರುವ ವಿನಾಶದ ಅಂಚಿನ ಸಸ್ಯ ಹಾಗೂ ಪ್ರಾಣಿ ಪ್ರಬೇಧಗಳನ್ನು ತಜ್ಞರ ಮೂಲಕ ಗುರುತಿಸಿ, ಅಧಿಕೃತವಾಗಿ ಪ್ರಕಟಿಸುವದು.
- ಪಂಚಾಯತ್ ರಾಜ ವ್ಯವಸ್ಥೆಗಳು ತಮ್ಮ ಒಟ್ಟೂ ಅನುದಾನದ ಶೇ. ಐದರಷ್ಟನ್ನು, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜೀವವೈವಿಧ್ಯ ಸಂರಕ್ಷಣಾ ಕಾರ್ಯಗಳಿಗೆ ವಿನಿಯೋಗಿಸುವ ಕುರಿತಾಗಿರುವ ಸರ್ಕಾರದ ನಿಯಮವನ್ನು, ಸೂಕ್ತವಾಗಿ ಎಲ್ಲೆಡೆ ಅನುಷ್ಠಾನಮಾಡುವಂತೆ ಜಾಗೃತಿ ಮೂಡಿಸುವದು
- ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಮುಂಡಿಗೆಕೆರೆ ಪಕ್ಷಿಧಾಮವನ್ನು "ಪಾರಂಪರಿಕ ಜೀವವೈವಿಧ್ಯ ತಾಣ" ಎಂದು ಘೋಷಿಸುವತ್ತ ಸೂಕ್ತ ಕ್ರಮ ಕೈಗೊಳ್ಳುವದು.



**ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಚೆನ್ನೈನಲ್ಲಿ ದಿ. 27–28 ನವೆಂಬರ್ 2019ರಂದು ಆಯೋಜಿಸಿದ ರಾಜ್ಯ ಜೀವವೈವಿಧ್ಯ ಮಂಡಳಿಗಳ 14ನೇ ಸಭೆಯಲ್ಲಿ ಭಾಗವಹಿಸಿದರು**

**ದಿ. 27–28 ನವೆಂಬರ್ 2019ರಂದು ಚೆನ್ನೈನಲ್ಲಿ ಜರುಗಿದ ಜೀವವೈವಿಧ್ಯ ಮಂಡಳಿಗಳ 14ನೇ ರಾಷ್ಟ್ರೀಯ ಸಭೆಯಲ್ಲಿ, ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ಕ.ಜೀ.ವೈ.ಮಂ.ಯ ಪ್ರಗತಿಯ ವರದಿ ಸಲ್ಲಿಸಿದರು.**






ದಿ. 16-03-2020ರಂದು ಆರಣ್ಯ ಇಲಾಖೆಯ ಶಿರಸಿ ವೃತ್ತ ಕಛೇರಿಯಲ್ಲಿ ನಡೆದ ಸಭೆಯಲ್ಲಿ, ಕೃಷಿಜೀವವೈವಿಧ್ಯ ಸಂರಕ್ಷಣೆಯ ಮಾರ್ಗೋಪಾಯಗಳ ಕುರಿತು ಜನಪ್ರತಿನಿಧಿಗಳೊಂದಿಗೆ ಮಂಡಳಿಯ ಅಧ್ಯಕ್ಷರು ಸಮಾಲೋಚನೆ ನಡೆಸಿದರು.

ಮಂಡಳಿಯ ಅಧ್ಯಕ್ಷರು ದಿ. 22.01.2020ರಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಭೆಟ್ಟಿಯಿತ್ತು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದರು



## ವಿಶೇಷ ಸಾಧನೆಗಳು

ಜೀವವೈವಿಧ್ಯ ಮಂಡಳಿಯು ಜೀವವೈವಿಧ್ಯ ಸಂರಕ್ಷಣೆಯ ಉದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರದ ಉನ್ನತಮಟ್ಟದಲ್ಲಿ ಪರಿಣಾಮಕಾರಿ ನೀತಿ ಹಾಗೂ ಕಾರ್ಯಕ್ರಮಗಳನ್ನು ನಿರೂಪಿಸುವಲ್ಲಿ ಪ್ರಯತ್ನಿಸುತ್ತಿದೆ. ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು ಸರ್ಕಾರದ ವಿವಿಧ ಇಲಾಖೆಗಳು ಹಾಗೂ ವಿವಿಧ ಕ್ಷೇತ್ರಗಳ ತಜ್ಞರ ಜೊತೆಯಾಗಿ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಕಳೆದ ಕೆಲವು ತಿಂಗಳುಗಳಲ್ಲಿ ಈ ನಿಟ್ಟಿನಲ್ಲಿ ಕೈಗೊಂಡ ಕೆಲವು ವಿಶೇಷ ಪ್ರಯತ್ನಗಳು ಈ ಕೆಳಗಿನಂತಿವೆ.

**ಹಸಿರು ಬಜೆಟ್:** ರಾಜ್ಯ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಯ ವ್ಯಾಪ್ತಿಯ ಎಂಪ್ರಿ ಸಂಶೋಧನಾ ಸಂಸ್ಥೆಯು ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆಯಾಧಾರಿತ ಸುಸ್ಥಿರ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ ಕುರಿತು ಹಲವಾರು ಮಾರ್ಗೋಪಾಯಗಳನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ರಾಜ್ಯ ಯೋಜನಾ ಇಲಾಖೆಯು ಸುಸ್ಥಿರ ಅಭಿವೃದ್ಧಿ ಆಶಯಗಳ ಅನುಷ್ಠಾನಕ್ಕಾಗಿ (ಎಸ್.ಡಿ.ಜಿ.) ವಿವರವಾದ ಕಾರ್ಯಯೋಜನೆಗಳನ್ನು ರೂಪಿಸಿದೆ. ಇವು ಕಾರ್ಯಗತವಾದರೆ, ಸಹನಶೀಲ ಅಭಿವೃದ್ಧಿ ಸಾಧಿಸುವ ಹಲವು ಮಾರ್ಗಗಳು ತೆರೆದುಕೊಳ್ಳಲಿವೆ. ಈ ಕುರಿತಾಗಿ ಮಂಡಳಿಯ ಅಧ್ಯಕ್ಷರು, ವಿಜ್ಞಾನಿಗಳು ಹಾಗೂ ವಿವಿಧ ಕ್ಷೇತ್ರಗಳ ತಜ್ಞರಿದ್ದ ಉನ್ನತ ನಿಯೋಗದೊಂದಿಗೆ ಫೆಬ್ರವರಿ ತಿಂಗಳಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿ **ಶ್ರೀ ಬಿ.ಎಸ್. ಯಡ್ಯೂರಪ್ಪನವರನ್ನು ಭೆಟ್ಟಿಯಾಗಿ ಗಮನ ಸೆಳೆದರು**. ಜೀವವೈವಿಧ್ಯ ಸಂರಕ್ಷಣೆ ಆಧಾರದಲ್ಲಿ ಕೆಲವು ಸುಸ್ಥಿರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ಕುರಿತಂತೆ ಶಿಫಾರಸ್ಸುಗಳನ್ನು ಸಲ್ಲಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳು ಇದರ ಮಹತ್ವವನ್ನು ಗುರುತಿಸಿ, ಅರಣ್ಯ ಮತ್ತು ಪರಿಸರ ಇಲಾಖೆಯ ಈ ವರ್ಷದ ಬೆಜೆಟ್ಟಿನಲ್ಲಿ ಇದರ ಪ್ರಸ್ತಾಪ ಮಾಡಿರುವದು ಸಂತಸದ ಸಂಗತಿ.

**ಭೂಕುಸಿತಕ್ಕೆ ಅಧ್ಯಯನ ಸಮಿತಿ:** ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲಿ ಕೆಲವು ವರ್ಷಗಳಿಂದ ಮಳೆಗಾಲದಲ್ಲಿ ನಿರಂತರವಾಗಿ ಭಾರಿ ಭೂಕುಸಿತವಾಗುತ್ತಿದೆ. ಕೊಡಗು ಹಾಗೂ ಚಿಕ್ಕಮಗಳೂರು ಸೇರಿದಂತೆ ಸಹ್ಯಾದ್ರಿಯ ಎಲ್ಲೆಡೆ ವಿವಿಧ ಪ್ರಮಾಣದಲ್ಲಿ ಆಗುತ್ತಿರುವ ಭೂಕುಸಿತದಿಂದಾಗಿ ಜನಜೀವನ ನಲುಗುತ್ತಿದೆ. ಇದರ ಗಂಭೀರತೆಯನ್ನು ಅರ್ಥೈಸಿಕೊಂಡು, ಭವಿಷ್ಯದಲ್ಲಿ ಇದನ್ನು ನಿಗ್ರಹಿಸುವ ಕುರಿತಾಗಿ ಹಲವಾರು ಸಾರ್ವಜನಿಕ ಸಂಘ–ಸಂಸ್ಥೆಗಳು ಹಾಗೂ ತಜ್ಞರು ಸರ್ಕಾರವನ್ನು ಅಗ್ರಹಿಸುತ್ತಲೇ ಇದ್ದಾರೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು, ಮಂಡಳಿಯ ಅಧ್ಯಕ್ಷರ ನೇತೃತ್ವದಲ್ಲಿ ಉನ್ನತಮಟ್ಟದ ತಜ್ಞಸಮಿತಿ ರಚಿಸಿದ್ದು, ಮೂರು ತಿಂಗಳಲ್ಲಿ ವರದಿ ಸಲ್ಲಿಸಲು ಆದೇಶಿಸಿದ್ದಾರೆ. ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಭೂಗರ್ಭಶಾಸ್ತ್ರ ಕ್ಷೇತ್ರದ ಹಲವು ವಿಜ್ಞಾನಿಗಳು ಇರುವ ಈ ಸಮಿತಿಯು ಈಗಾಗಲೆ ಕಾರ್ಯರಂಭ ಮಾಡಿದ್ದು, ವ್ಯಾಪಕ ಸಮಾಲೋಚನೆ, ಸ್ಥಳಭೆಟ್ಟಿ, ಮಾಹಿತಿ ಹಾಗೂ ಈಗಾಗಲೇ ಇರುವ ವೈಜ್ಞಾನಿಕ ಅಧ್ಯನಗಳ ಕ್ರೋಢೀಕರಣದಂಥ ಕಾರ್ಯಗಳಲ್ಲಿ ತೊಡಗಿದೆ. ಶೀಘ್ರದಲ್ಲಿ ಇದರ ಸಮಗ್ರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ.

**ಮಂಗನಕಾಯಿಲೆ ಸಂಶೋಧನೆ:** ಮಲೆನಾಡಿನಲ್ಲಿ, ವಿಶೇಷವಾಗಿ ಶಿವಮೊಗ್ಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಿಂದ ಮಂಗನಕಾಯಿಲೆಯು ಕಳೆದ ಎರಡು ವರ್ಷಗಳಿಂದ ತೀವ್ರ ಸ್ವರೂಪ ಪಡೆದಿದೆ. ಉಣ್ಣೆ ಕಚ್ಚದಂತೆ ಲೇಪಿಸಿಕೊಳ್ಳುವ ಡಿ.ಎಮ್.ಪಿ ತೈಲದ ಲಭ್ಯತೆ ಹಾಗೂ ಸಾಕಷ್ಟು ಲಸಿಕೆಗಳ ಪೂರೈಕೆಯನ್ನು ಸರ್ಕಾರ ಮಾಡುತ್ತಿದೆ. ಆದರೆ, ಕಾಯಿಲೆಯ ಮೂಲ ಸ್ವರೂಪ ಹಾಗೂ ಅದು ಆಗಾಗ ಸ್ಫೋಟವಾಗುವದಕ್ಕೆ ಕಾರಣಗಳು ಇನ್ನೂ ತಿಳಿದಿಲ್ಲ. ಈ ಕುರಿತಾಗಿ ಅರಿಯಲು ಮಂಡಳಿಯ ಅಧ್ಯಕ್ಷರು ರೋಗಪೀಡಿತ ಪ್ರದೇಶದಲ್ಲಿ ಪ್ರವಾಸಮಾಡಿ, ಸಂಬಂದಪಟ್ಟವರೊಂದಿಗೆ ಚರ್ಚಿಸಿ, ಪಾರಿಸಾರಿಕ ಹಾಗೂ ರೋಗನಿದಾನಶಾಸ್ತ್ರದ ಆಧಾರದಲ್ಲಿ ಆಳ ಸಂಶೋಧನೆ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದರು. ಹಲವಾರು ತಜ್ಞರೂ ಸರ್ಕಾರಕ್ಕೆ ಈ ಕುರಿತು ನಿವೇದನೆ ಸಲ್ಲಿಸಿದ್ದರು. ಇದರ ಅಗತ್ಯವನ್ನು ಗುರುತಿಸಿ, ಸನ್ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗದಲ್ಲಿರುವ ವೈರಾಣು ಪ್ರಯೋಗಾಲಯದ ಮೂಲಕ ವಿವರವಾದ ಸಂಶೋಧನಾ ಕಾರ್ಯಕ್ಕೆ ಆದೇಶ ನೀಡಿದ್ದಾರೆ.

**ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಜೀವವೈವಿಧ್ಯ ಸಂರಕ್ಷಣೆ:** ಜೀವವೈವಿಧ್ಯ ಕಾನೂನಿನ ಅನ್ವಯ, ನಗರ ಹಾಗೂ ಪಟ್ಟಣಗಳಲ್ಲೂ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿ, ಅಲ್ಲಿನ ಜೀವಸಂಕುಲಗಳನ್ನು ರಕ್ಷಿಸುವ ಕಾರ್ಯಕ್ರಮ ರೂಪಿಸಬೇಕು. ಈ ನಿಟ್ಟಿನಲ್ಲಿ ಶಿವಮೊಗ್ಗದ ನಗರಸಭೆಯ ಜೊತೆ ಮಂಡಳಿಯ ಅಧ್ಯಕ್ಷರು ವಿವರವಾದ ಸಮಾಲೋಚನೆ ನಡೆಸಿದ್ದರು. ಅಲ್ಲಿನ ಸ್ಮಾರ್ಟ್ ಸಿಟಿ ಯೋಜನೆಯ ಮೂಲಕ, ನಗರವ್ಯಾಪ್ತಿಯ ಹಸಿರು ಪ್ರದೇಶಗಳ ರಕ್ಷಣೆಗೆ ಹಾಗೂ ಹೊರವಲಯದಲ್ಲಿ ಮಾಲಿನ್ಯ ತಡೆಗಟ್ಟುವ ಉದ್ದೇಶದ ಹಸಿರು ವಲಯ ನಿರ್ಮಾಣ ಕಾರ್ಯಕ್ಕೆ ಇದೀಗ ಚಾಲನೆ ದೊರಕಿದೆ.

## ಮಂಡಳಿಯ ವಿಶೇಷ ಕಾರ್ಯಚಟುವಟಿಕೆಗಳು

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಇತ್ತೀಚೆಗೆ ಹಲವು ಪ್ರಮುಖ ಚಟುವಟಿಕೆಗಳನ್ನು ಕೈಗೊಂಡಿದೆ. ಇದಕ್ಕೆ ಪೂರಕವಾಗಿ ಹಲವಾರು ಸಮಾಲೋಚನೆ ಸಭೆಗಳನ್ನು ಆಯೋಜಿಸಿದೆ. ವಿವಿದೆಡೆ ನಡೆದ ಕಾರ್ಯಕ್ರಮಗಳಲ್ಲಿ ಮಂಡಳಿ ಭಾಗವಹಿಸಿದೆ. ಅಂಥ ಕೆಲವು ಪ್ರಮುಖ ಚಟುವಟಿಕೆಗಳನ್ನು ಇಲ್ಲಿ ನೀಡಲಾಗಿದೆ.

- ದಿ.19/12/2019ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಜೀವವೈವಿಧ್ಯ ಮಂಡಳಿಯು ಪ್ರಕಟಿಸಿದ "ಕರ್ನಾಟಕ ಸಸ್ಯಸಂಪದ" (Flora of Karnataka) ಗ್ರಂಥವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಟಿ. ಎಮ್. ವಿಜಯಭಾಸ್ಕರ್, ಅರಣ್ಯ ಮತ್ತು ಪರಿಸರ ಇಲಾಖೆಯ ಅಪರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಂದೀಪ ದವೆ, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿಜಯಕುಮಾರ್ ಗೋಗಿ, ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಪುನಾಟಿ ಶ್ರೀಧರ್ ಹಾಗೂ ಹಲವಾರು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳ ಜೊತೆಗೆ, ಮಂಡಳಿಯ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಭಾಗವಹಿಸಿದ್ದರು.

- ದಿ.27/11/2019ರಂದು ರಂದು ಚೆನ್ನೈನಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಸಂಘಟಿಸಿದ್ದ ರಾಜ್ಯ ಜೀವವೈವಿಧ್ಯ ಮಂಡಳಿಗಳ ಹದಿನಾಲ್ಕನೇ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಹಾಗೂ ಸದಸ್ಯ ಕಾರ್ದಶಿಗಳಾದ ಶ್ರೀ ವೀರೇಂದರ್ ಸಿಂಗ್ ಅವರು ಭಾಗವಹಿಸಿದ್ದರು.

- "ಭವಿಷ್ಯದ ಜಾಗತಿಕ ಜೀವವೈವಿಧ್ಯ ಸಂರಕ್ಷಣಾ ಸೂತ್ರಗಳು" ಕುರಿತಾಗಿ ಚರ್ಚಿಸಲು ಹೈದರಾಬಾದಿನಲ್ಲಿ ದಿ.13/03/2020ರಂದು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಸಂಘಟಿಸಿದ್ದ ಉನ್ನತಮಟ್ಟದ ಸಮಾಲೋಚನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಭಾಗವಹಿಸಿದರು.

- ದಿ.29.01.2020ರಂದು ಕೊಡಗಿನ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದಲ್ಲಿ ಜೀವವೈವಿಧ್ಯ ಸಂರಕ್ಷಣೆ ಕುರಿತಾಗಿ ನಡೆದ ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

- ದಿ 11/03/2020 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯ ನಲ್ಲೂರು ಹುಣಸೆತೋಪು ಪಾರಂಪರಿಕ ಜೀವವೈವಿಧ್ಯತಾಣಕ್ಕೆ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವೀರೇಂದರ್ ಸಿಂಗ್ ಅವರು ಭೆಟ್ಟಿ ನೀಡಿ ತಳಮಟ್ಟದಲ್ಲೇ ಸಮಾಲೋಚನೆ ನಡೆಸಿದರು. ಅಲ್ಲಿನ ಸಹಾಯಕ ಆಯುಕ್ತರು, ತಹಶೀಲದಾರ್, ವಿಭಾಗ ಅರಣ್ಯ ಸಂರಕ್ಷಣಾಧಿಕಾರಿ, ತಾಲ್ಲೂಕು ಪಂಚಾಯತ ಕಾರ್ಯ ನಿರ್ವಹಣಾಧಿಕಾರಿ, ವಲಯ ಅರಣ್ಯಾದಿಕಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸ್ಥಳಿಯ ಗ್ರಾಮ ಪಂಚಾಯತದ ಜನಪ್ರತಿನಿಧಿಗಳು ಮತ್ತು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಸದಸ್ಯರ ಜೊತೆ ಈ ಪ್ರದೇಶದ ರಕ್ಷಣೆಗಾಗಿ ಮುಂಬರುವ ದಿನಗಳಲ್ಲಿ ಕೈಗೊಳ್ಳಬೇಕಾದ ಮಾರ್ಗಗಳ ಕುರಿತು ಕಾರ್ಯಯೋಜನೆ ಸಿದ್ದಪಡಿಸಲಾಯಿತು.

- ದಿ.07.01.2020ರಂದು, ಉತ್ತರ ಕನ್ನಡ ಜಿಲ್ಲೆಯ ಸೋಂದಾ ಸ್ವರ್ಣವಲ್ಲಿಯ "ಸಸ್ಯಲೋಕ"ದ ಆಶ್ರಯದಲ್ಲಿ, ಕ.ಜೀ.ಮಂ.ಯು ಮಲೆನಾಡಿನ ಜಿಲ್ಲೆಗಳ ವ್ಯಾಪ್ತಿಯ "ಜೀವವೈವಿಧ್ಯ ಸಂರಕ್ಷಣಾ ಸಮಿತಿಗಳ" ಬಲವರ್ಧನಾ ಕಾರ್ಯಾಗಾರವನ್ನು ಸಂಘಟಿಸಿತ್ತು. ಮುನ್ನೂರಕ್ಕೂ ಹೆಚ್ಚಿನ ಗ್ರಾಮ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ಇದರಲ್ಲಿ ಮಂಡಳಿಯ ಅಧ್ಯಕ್ಷರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದರು.

- ದಿ.30.01.2020ರಂದು, ಮೈಸೂರಿನಲ್ಲಿ ಆಯೋಜಿತವಾಗಿದ್ದ "ಬೀಜಮಸೂದೆ" ಕುರಿತ ರಾಜ್ಯಮಟ್ಟದ ವಿಚಾರಗೋಷ್ಠಿಯಲ್ಲಿ ಮಂಡಳಿಯ ಅಧ್ಯಕ್ಷರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದರು. ಪ್ರಸಿದ್ಧ ಕೃಷಿ ವಿಜ್ಞಾನಿ ಡಾ. ಎಮ್. ಮಹದೇವಪ್ಪ, ತೋಟಗಾರಿಕಾ ವಿ.ವಿಯ ನಿವೃತ್ತ ಉಪಕುಲಪತಿ ಡಾ. ಬಿ.ಎಸ್. ದಂಡಿನ್, ಅರ್ಥಶಾಸ್ತ್ರಜ್ಞ ಪ್ರೊ. ಬಿ. ಎಮ್. ಕುಮಾರಸ್ವಾಮಿ ಮುಂತಾದವರು ಅದರಲ್ಲಿ ಭಾಗವಹಿಸಿದ್ದರು.

- ದಿ.10/03/2020ರಂದು ಮಂಡಳಿಯ ಸಮಾಲೋಚನಾ ಕೊಠಡಿಯಲ್ಲಿ, ಶಿವಮೊಗ್ಗ ಜಿಲ್ಲೆಯ ದೇವರಕಾಡು ಪ್ರದೇಶಗಳ ಸಂರಕ್ಷಣೆಗೆ ಅರಣ್ಯ ಇಲಾಖೆಯ ಮೂಲಕ ರೂಪಿಸಬಹುದಾದ ಯೋಜನೆಗಳ ಕುರಿತು ಸಮಾಲೋಚನಾ ಸಭೆ ನಡೆಯಿತು. ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸದಸ್ಯ ಕಾರ್ಯಶಿಗಳು, ಹಿರಿಯ ಅರಣ್ಯಾಧಿಕಾರಿಗಳು, ವಿಜ್ಞಾನಿಗಳು, ಶಿವಮೊಗ್ಗ ಜಿಲ್ಲೆಯ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



ಮಂಡಳಿಯ ಅಧ್ಯಕ್ಷರು ದಿ. 30.01.2020ರಂದು, ಮೈಸೂರಿನಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮ್ಮುಖದಲ್ಲಿ, ಜಿಲ್ಲೆಯಲ್ಲಿ ಜೀವವೈವಿಧ್ಯ ಕಾನೂನಿನ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.



ದಿ. 07.01.2020ರಂದು, ಸೋಂದಾ ಸ್ವರ್ಣವಲ್ಲಿಯ "ಸಸ್ಯಲೋಕ"ದ ಆಶ್ರಯದಲ್ಲಿ, ಮಲೆನಾಡಿನ ಜಿಲ್ಲೆಗಳ ವ್ಯಾಪ್ತಿಯ "ಜೀವವೈವಿಧ್ಯ ಸಂರಕ್ಷಣಾ ಸಮಿತಿಗಳ" ಬಲವರ್ಧನಾ ಕಾರ್ಯಾಗಾರದಲ್ಲಿ ಮಂಡಳಿಯ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.



ದಿ.07.01.2020ರಂದು ಸೋಂದಾ ಬಳಿಯ "ಸಸ್ಯಲೋಕ ಸಸ್ಯೋದ್ಯಾನ"ಕ್ಕೆ ಮಂಡಳಿಯ ಅಧ್ಯಕ್ಷರು ವಿವಿಧ ತಜ್ಞರು ಹಾಗೂ ಜನಪ್ರತಿನಿಧಿಗಳೊಂದಿಗೆ ಭೆಟ್ಟಿಯಿತ್ತು, ಸಂರಕ್ಷಿಸಿರುವ ವಿನಾಶದಂಚಿನ ಸಸ್ಯವೈವಿಧ್ಯವನ್ನು ವೀಕ್ಷಿಸಿದರು.



ಕುಮಟಾ ತಾಲ್ಲೂಕು ಪಂಚಾಯತದಲ್ಲಿ ಜೀವವೈವಿಧ್ಯ ಸಮಿತಿಗಳ ಬಲವರ್ಧನೆ ಕುರಿತು, ದಿ. 19–2–2020ರಂದು, ಮಂಡಳಿಯ ಅಧ್ಯಕ್ಷರು ತಜ್ಞರು ಹಾಗೂ ಜನಪ್ರತಿನಿಧಿಗಳ ಜೊತೆ ಮಾಲೋಚನಾ ಸಭೆ ನಡೆಸಿದರು.

## ತಳಮಟ್ಟದಲ್ಲಿ ಜೀವವೈವಿಧ್ಯ ಸಂರಕ್ಷಣೆ

**ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಬಲವರ್ಧನೆ :** ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹಂಚಿಕುಪ್ಪ ಗ್ರಾಮ ಪಂಚಾಯತವು ಜೀವವೈವಿಧ್ಯ ಸಂರಕ್ಷಣೆಯಲ್ಲಿ ಅಸಕ್ತಿ ಇರುವ ಎಲ್ಲರೂ ಭೆಟ್ಟಿ ನೀಡಲೇಬೇಕಾದ ಸ್ಥಳ. ಎಲ್ಲ ಗ್ರಾಮಸ್ಥರ ಸಹಕಾರದೊಂದಿಗೆ ಇಲ್ಲಿನ ಪಂಚಾಯತದ "ಜೀವವೈವಿಧ್ಯ ನಿರ್ವಣಾ ಸಮಿತಿಯು" ತನ್ನ ವ್ಯಾಪ್ತಿಯ ನೆಲ–ಜಲ, ಕೆರೆ, ಗೋಮಾಳ, ಔಷಧಿ ಮೂಲಿಕೆಗಳು ಇತ್ಯಾದಿಗಳ ರಕ್ಷಣೆಗಾಗಿ ನಿರಂತರ ಕಾಳಜಿವಹಿಸುತ್ತಿದೆ. ಮಾಹಿತಿಪೂರ್ಣ "ಜನತಾ ಜೀವವೈವಿಧ್ಯ ದಾಖಲಾತಿ" ಅಧ್ಯಯನ ಕೈಗೊಂಡಿದೆ. ಗ್ರಾಮ ಸ್ವರಾಜ್ಯದ ಆಶಯದಂತೆ ತಮ್ಮೂರಿನ ನೈಸರ್ಗಿಕ ಸಂಪನ್ಮೂಲಗಳನ್ನು ತಾವೇ ರಕ್ಷಿಸುವ ಈ ಕಾರ್ಯಕ್ಕೆ ಇಲ್ಲಿನ ಜನತೆ ಮುಂದಾಗಿರುವದು ಅಭಿನಂದನೀಯ ಮತ್ತು ಎಲ್ಲರಿಗೂ ಮಾದರಿಯಾದದ್ದು.

ಇದೇ ತೆರನಲ್ಲಿ, ಎಲ್ಲ ಗ್ರಾಮ ಪಂಚಾಯತ, ತಾಲುಕು ಪಂಚಾಯತ, ಜಿಲ್ಲಾ ಪಂಚಾಯತ ಹಾಗೂ ಪಟ್ಟಣ–ನಗರಗಳಲ್ಲಿ "ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು" ರಚಿಸಿ, ಬಲವರ್ಧನೆಗೊಳಿಸುವ ಕೆಲಸ ಇದೀಗ ಸಾಗಿದೆ. ಎಲ್ಲ 6101 ಗ್ರಾಮ ಪಂಚಾಯತಗಳಲ್ಲಿ ಈಗಾಗಲೇ ಇವು ಕಾರ್ಯಾರಂಭ ಮಾಡಿವೆ. ತಮ್ಮ ವ್ಯಾಪ್ತಿಯ ಸಸ್ಯ–ಪ್ರಾಣಿವೈವಿಧ್ಯ, ಅವುಗಳ ಸಂರಕ್ಷಣೆ, ಸುಸ್ಥಿರ ಬಳಕೆ ಕುರಿತ ಸ್ಥಳೀಯ ಪಾರಂಪರಿಕ ಜ್ಞಾನ– ಇವೆಲ್ಲವುಗಳನ್ನು ದಾಖಲಿಸಿ "ಜನತಾ ಜೀವವೈವಿಧ್ಯ ದಾಖಲಾತಿ" ರಚಿಸುವ ಕಾರ್ಯವನ್ನು, ವಿವಿಧ ಸಂಪನ್ಮೂಲ ವ್ಯಕ್ತಿಗಳ ನೇತೃತ್ವದಲ್ಲಿ ಕೈಗೊಂಡಿವೆ.

**ಪಾರಂಪರಿಕ ಜೀವವೈವಿಧ್ಯ ತಾಣಗಳ ರಚನೆ ಹಾಗೂ ಪೋಷಣೆ:** ಜೀವವೈವಿಧ್ಯ ಕಾನೂನಿ ಅನ್ವಯ, ರಾಜ್ಯದ ವಿವಿದೆಡೆ ಇರುವ ಅಪರೂಪದ ಹಾಗೂ ಅಮೂಲ್ಯವಾದ ಜೀವಸಂಕುಲಗಳಿರುವ ಪ್ರದೇಶಗಳನ್ನು "ಪಾರಂಪರಿಕ ಜೀವವೈವಿಧ್ಯ ತಾಣ"ಗಳೆಂದು ಗುರುತಿಸಿ, ಸ್ಥಳೀಯ ಜನರ ಸಹಭಾಗಿತ್ವದೊಂದಿಗೆ ರಕ್ಷಿಸುವ ಕಾರ್ಯಕ್ಕೆ ನಡೆಯುತ್ತಿದೆ. ಈಗಾಗಲೇ ಮಂಡಳಿಯು ಈವರೆಗೆ ಗುರುತಿಸಿರುವ ನಾಲ್ಕು ಅಂಥ "ಪಾರಂಪರಿಕ ಜೀವವೈವಿಧ್ಯ ತಾಣ"ಗಳ ರಕ್ಷಣೆಗೆ ಮಾರ್ಗಸೂತ್ರ ರೂಪಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಲ್ಲೂರಿನಲ್ಲಿರುವ ಪುರಾತನ ಹುಣಸೆಮರದ ತೋಪು ಪಾರಂಪರಿಕ ಜೀವವೈವಿಧ್ಯ ತಾಣವನ್ನು ರಕ್ಷಿಸುವ ಉದ್ದೇಶಕ್ಕಾಗಿ ವಿಶೇಷ ಯೋಜನೆ ರೂಪಿಸಿ ಕಾರ್ಯಗತಗೊಳಿಸುವ ಕಾರ್ಯವು ಸಾಗಿದೆ.

**ಜೈವಿಕ ಸಂಪನ್ಮೂಲದ ವಾಣಿಜ್ಯಕ ಬಳಕೆಯಲ್ಲಿ ದೊರಕಿದ ಲಾಭಾಂಶದ ವಿತರಣೆ :** ಜೀವವೈವಿಧ್ಯ ಕಾನೂನಿನ ಅನ್ವಯ ಯಾವುದೇ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯಿಕ ಉದ್ದೇಶಕ್ಕೆ ಬಳಸಿದಾಗ, ಆ ಕುರಿತ ಪಾರಂಪರಿಕ ಜ್ಞಾನವಿರುವ ಸಮೂದಾಯ ಅಥವಾ ಸಂಸ್ಥೆಗಳಿಗೆ ಲಾಭಾಂಶವನ್ನು ನೀಡಬೇಕು. ಈ ಕುರಿತಾಗಿ ಮಂಡಳಿಯಲ್ಲಿರುವ ವಿಭಾಗವು ಹಲವು ಆಯಾಮಗಳಲ್ಲಿ ಪ್ರಯತ್ನಿಸುತ್ತಿದೆ. ವಾಣಿಜ್ಯಕ ಉದ್ದೇಶಗಳಿಗೆ ಜೈವಿಕ ಸಂಪನ್ಮೂಲಗಳನ್ನು ಬಳಸುವ ಉದ್ಯಮಗಳನ್ನು ಗುರುತಿಸಿ ನೋಂದಣಿಮಾಡುವದು, ಅವುಗಳು ಬಳಸುವ ಜೈವಿಕ ಸಂಪನ್ಮೂಲಗಳ ಮಾಹಿತಿ ಸಂಗ್ರಹಿಸುವದು ಹಾಗೂ ಅವರು ನೀಡಬೇಕಾದ ಲಾಭಾಂಶವನ್ನು ಸಂಗ್ರಹಿಸುವದಕ್ಕೆ ಕ್ರಮಕೈಗೊಳ್ಳುತ್ತಿವೆ. ಸುಮಾರು ಐವತ್ತಕ್ಕೂ ಮಿಕ್ಕಿ ಉದ್ಯಮಗಳು ಈ ಬಗೆಯ ಕಾನೂನಿನ ಕ್ರಮವನ್ನು ಈಗಾಗಲೇ ಪಾಲಿಸುತ್ತಿದ್ದು, ತಮ್ಮ ಲಾಭಾಂಶದ ಪಾಲನ್ನು ಮಂಡಳಿಗೆ ಸಂದಾಯ ಮಾಡಿದೆ. ಅವರನ್ನು ಮಂಡಳಿಯು ಅಭಿನಂದಿಸುತ್ತದೆ. ಈ ಮೊತ್ತವನ್ನು ತಳಮಟ್ಟದಲ್ಲಿ ಆ ಸಂಪನ್ಮೂಲಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುವ ಸಮುದಾಯಗಳ ಅಭಿವೃದ್ಧಿಗೆ ಬಳಸುವ ಸೂಕ್ತ ಯೋಜನೆಯನ್ನು ಇದೀಗ ಮಂಡಳಿಯು ರೂಪಿಸುತ್ತಿದೆ. ಹಲವಾರು ಸಲ ಮನವೊಲಿಸಿದರೂ ಜೀವವೈವಿಧ್ಯ ಕಾನೂನನ್ನು ಸತತವಾಗಿ ಉಲ್ಲಂಘಿಸುತ್ತಿರುವ ಇತರ ಉದ್ಯಮಗಳನ್ನು ಕಾನೂನಿನ ಪ್ರಕ್ರಿಯೆಗೆ ಒಳಪಡಿಸುವ ಜವಾಬ್ದಾರಿಯನ್ನು ಸಹ ಮಂಡಳಿಯು ಕಾನುನುಬದ್ಧವಾಗಿ ನಿರ್ವಹಿಸುತ್ತಿದೆ.

**ತಳಮಟ್ಟದಲ್ಲಿ ಸಮಾಲೋಚನಾ ಸಭೆಗಳು:** ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದಲ್ಲಿ ಜೀವವೈವಿಧ್ಯ ಸಮಿತಿಗಳನ್ನು ಸಬಲೀಕರಿಸುವದು, ಸರ್ಕಾರಿ ಯೋಜನೆಗಳಲ್ಲಿ ಜೀವವೈವಿಧ್ಯ ಸಂರಕ್ಷಣೆಗೆ ಆದ್ಯತೆ ದೊರಕಿಸುವದು. ಗ್ರಾಮ ಪಂಚಾಯತ, ತಾಲ್ಲೂಕು ಜಿಲ್ಲಾಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿ ಕಾರ್ಯಕ್ರಮವನ್ನು ಪೂರ್ಣಗೊಳಿಸುವದು, ಇತ್ಯಾದಿಗಳಿಗೆ ಆದ್ಯತೆ ನೀಡಲಾಗಿದೆ. ಈ ನಿಟ್ಟಿನಲ್ಲಿ ಮಂಡಳಿಯ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ಅವರು ಬಳ್ಳಾರಿ, ಕೊಪ್ಪಳ, ಮೈಸೂರು, ಕೊಡಗು, ಧಾರವಾಡ ಹಾಗೂ ಶಿವಮೊಗ್ಗದಲ್ಲಿ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನು ಅಲ್ಲಿನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಸಿದ್ದಾರೆ. ಅಂತೆಯೆ, ಬೆಂಗಳೂರು ಗ್ರಾಮಾಂತರ, ಸಾಗರ, ಸೊರಬ, ಯಲ್ಲಾಪುರ, ಶಿಕಾರಿಪುರ, ಶಿರಸಿ, ಸಿದ್ದಾಪುರ ಕುಮಟಾ, ಹೊನ್ನಾವರ, ಕುಂದಾಪುರ ಮುಂತಾದ ತಾಲ್ಲುಕು ಪಂಚಾಯತಿಗಳಲ್ಲೂ ಕೂಡ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲಿಸಿದ್ದಾರೆ. ಐವತ್ತಕ್ಕೂ ಹೆಚ್ಚಿನ ಗ್ರಾಮ ಪಂಚಾಯತಗಳಿಗೆ ಭೆಟ್ಟಿ ನೀಡಿದ್ದಾರೆ ಹಾಗೂ ಸಮೂದಾಯದ ಅಭಿಪ್ರಾಯ ಕ್ರೋಢೀಕರಣಕ್ಕಾಗಿ ಹಲವಾರು ಗ್ರಾಮಾಂತರ ಸಭೆಗಳಲ್ಲಿ ಭಾಗವಹಿಸಿದ್ದಾರೆ.




ದಿ.29.01.2020ರಂದು, ಕೊಡಗಿನ ಪೊನ್ನಂಪೇಟೆಯ ಅರಣ್ಯ ಕಾಲೇಜಿನಲ್ಲಿ ಜೀವವೈವಿಧ್ಯ ಸಂರಕ್ಷಣೆ ಕುರಿತು ಜರುಗಿದ ರಾಷ್ಟ್ರೀಯ ಕಾರ್ಯಾಗಾರದಲ್ಲಿ, ಮಂಡಳಿಯ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.



ಮಂಡಳಿಯ ಅಧ್ಯಕ್ಷರು ದಿ. 21ಜನವರಿ 2020ರಂದು, ಕೊಪ್ಪಳದಲ್ಲಿ ಜಿಲ್ಲಾಮಟ್ಟದ ಜೀವವೈವಿಧ್ಯ ಸಂರಕ್ಷಣೆ ಕುರಿತ ಸಮಾಲೋಚನೆ ಹಾಗೂ ತರಬೇತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

## ಜೀವವೈವಿಧ್ಯದ ಸಂಶೋಧನೆ ಹಾಗೂ ಮಾಹಿತಿ ಪ್ರಸರಣೆ

**ಸಂಶೋಧನೆ:** ನಾಡಿನ ವಿವಿಧ ಬಗೆಯ ಪರಿಸರಗಳಲ್ಲಿ ಇರುವ ಜೀವವೈವಿಧ್ಯದ ಹರವು, ಅವುಗಳ ಸಂರಚನೆ, ಅವು ನೀಡುತ್ತಿರುವ ಪಾರಿಸಾರಿಕ ಸೇವೆಗಳು ಈ ಕುರಿತಂತೆಲ್ಲ ವಿವಿಧ ಆಯಾಮಗಳ ಸಂಶೋಧನೆ ಯೋಜನೆಗಳನ್ನೂ ಮಂಡಳಿಯು ಕೈಗೆತ್ತಿಕೊಂಡಿದೆ. ವಿವಿಧ ಸಂಶೋಧನಾ ಸಂಸ್ಥೆಗಳು ಹಾಗೂ ಹಾಗೂ ತಜ್ಞರಿಗೆ ಯೋಜನಾ ಅನುದಾನ ನೀಡಿ ಈ ಅಧ್ಯಯನಗಳನ್ನು ಜಾರಿಮಾಡಲಾಗುತ್ತಿದೆ. ಸಹ್ಯಾದ್ರಿ ತಪ್ಪಲಿನ ಶೋಲಾ ಅರಣ್ಯದ ಕುರಿತಾದ ಅಧ್ಯಯನ ಸೇರಿದಂತೆ, ಈ ವರ್ಷವೂ ಕೆಲವು ಪ್ರಮುಖ ಅಧ್ಯಯನಗಳಿಗೆ ಚಾಲನೆ ನೀಡಲಾಗಿದೆ.

**ತಜ್ಞರ ವಿಶೇಷ ಸಭೆಗಳು ಹಾಗೂ ಚಟುವಟಿಕೆಗಳು:** ಜೀವವೈವಿಧ್ಯದ ವಿವಿಧ ಮಜಲುಗಳನ್ನು ಸಮಗ್ರವಾಗಿ ದಾಖಲಿಸುವ ಕುರಿತಂತೆ ಕೆಲವು ವಿಶೇಷ ಸಭೆಗಳು ಹಾಗೂ ಚಟುವಟಿಕೆಗಳು ನಡೆದವು. ಅವುಗಳಲ್ಲಿ ಪ್ರಮುಖವಾದವು ಇಲ್ಲಿವೆ.

- ರಾಜ್ಯದಲ್ಲಿರುವ ವಿನಾಶದಂಚಿನ ಸಸ್ಯ ಹಾಗೂ ಪ್ರಾಣಿ ಪ್ರಬೇಧಗಳನ್ನು ಪಟ್ಟಿಮಾಡುವ ಮಾರ್ಗಸೂತ್ರ ರಚಿಸಲು ತಜ್ಞರ ಸಮಿತಿಯ ಸಭೆ.
- ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಬಲವರ್ಧನೆ ಉದ್ದೇಶಕ್ಕಾಗಿ, ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರಿಂದ ಅರಣ್ಯ ವೃತ್ತ, ಜಿಲ್ಲೆ ಹಾಗೂ ತಾಲ್ಲೂಕುವಾರು, ವಿಡಿಯೋ ಕಾನ್ಫರೆನ್ಸ್ ಮೂಲಕ ಸಮಾಲೋಚನಾ ಸಭೆ.
- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತ ಹಾಗೂ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ "ಜನತಾ ಜೀವವೈವಿಧ್ಯ ದಾಖಲಾತಿ" ಅಧ್ಯಯನ ಕೈಗೊಳ್ಳಲು ನಿಯೋಜಿತವಾಗಿರುವ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿ.
- "ಜನತಾ ಜೀವವೈವಿಧ್ಯ ದಾಖಲಾತಿ" ಅಧ್ಯಯನಗಳ ಗುಣಮಟ್ಟ ಪರಿಶೀಲಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಪರವಾಗಿ ಭೇಟಿ ನೀಡಿದ್ದ ತಜ್ಞರ ಸಮಿತಿಯೊಂದಿಗೆ ಸಭೆ ಹಾಗೂ ಕೆಲವು ಗ್ರಾಮ ಪಂಚಾಯತಗಳಿಗೆ ಭೇಟಿ.

**ಮಾಹಿತಿ ಪ್ರಸರಣೆ:** ಜೀವವೈವಿಧ್ಯ ಸಂರಕ್ಷಣೆ ವಿಧಾನಗಳು ಮತ್ತು ಈ ಕುರಿತ ಮಂಡಳಿಯ ಯೋಜನೆಗಳ ಕುರಿತಾಗಿ, ಸರ್ಕಾರ ಹಾಗೂ ಸಮಾಜದ ಎಲ್ಲ ಸ್ಥರಗಳಲ್ಲಿ ಪಸರಿಸುವ ಉದ್ದೇಶಕ್ಕಾಗಿ ಮಂಡಳಿಯು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಈ ವಾರ್ತಾಪತ್ರದ ಪ್ರಕಟಣೆ ಹೊರತಾಗಿ, ಕಾಲಕಾಲಕ್ಕೆ ಪತ್ರಿಕೆಗಳಲ್ಲಿ ಜಾಹಿರಾತು ಹಾಗೂ ಮಾಹಿತಿಗಳನ್ನು ಪ್ರಕಟಿಸುತ್ತಿದೆ. ಜೀವವೈವಿಧ್ಯ ಮಂಡಳಿಯ ಆಶಯಗಳು ಹಾಗೂ ಚಟುವಟಿಕೆಗಳ ಕುರಿತು ವಿಶೇಷ ಸಂದರ್ಶನಾಧಾರಿತ ಮಾಹಿತಿಪೂರ್ಣ ಕಾರ್ಯಕ್ರಮ ಸರಣಿಯೊಂದನ್ನು, ಮೈಸೂರಿನ ಆಕಾಶವಾಣಿಯು ಕಳೆದ ಜನರಿಯಿಂದ ಮಾರ್ಚಿನವರೆಗೆ ಪ್ರತಿ ಬುಧವಾರ ಬೆಳಗ್ಗೆ 7.20ಗಂಟೆಗೆ ರಾಜ್ಯಾದ್ಯಂತ ಪ್ರಸಾರ ಮಾಡಿದೆ.

**ಪ್ರಕಟಣೆಗಳು:** ಮಾಹಿತಿ ಪ್ರಸರಣಕ್ಕಾಗಿ ಮಂಡಳಿಯು ಈ ವರ್ಷ ಅನೇಕ ಪ್ರಮುಖ ವರದಿ ಹಾಗೂ ಹೊತ್ತಿಗೆಗಳನ್ನು ಪ್ರಕಟಿಸಿದೆ. ಅಂಥ ಪ್ರಮುಖ ಪ್ರಕಟಣೆಗಳು:

- ಕರ್ನಾಟಕ ರಾಜ್ಯದ ಸಂಪೂರ್ಣ ಸಸ್ಯ ಸಂಪನ್ಮೂಲಗಳ ವಿವರ ನೀಡುವ "ಕರ್ನಾಟಕ ಸಸ್ಯ ಸಂಪದ" (Flora of Karnataka) ಗ್ರಂಥ.
- ಕರ್ನಾಟಕದಲ್ಲಿ ವಾಣಿಜ್ಯಕ ಬಳಕೆಯಲ್ಲಿರುವ ಸಸ್ಯಸಂಪತ್ತಿನ ಯಾದಿ.
- ರಾಜ್ಯದ ಅರಣ್ಯದಲ್ಲಿ ಲಭ್ಯವಿರುವ ಔಷಧಿಮೂಲಿಕೆ ಸಂಪತ್ತು ಹಾಗೂ ಅವುಗಳ ಪ್ರಸ್ತುತ ಲಭ್ಯತೆ ಕುರಿತು, ಅರಣ್ಯ ವಿಭಾಗವಾರು ವರದಿ (ರಾಷ್ಟ್ರೀಯ ಔಷಧಿಮೂಲಿಕೆ ಮಂಡಳಿಯ ಸಹಕಾರದೊಂದಿಗೆ ಹಮ್ಮಿಕೊಂಡ ಯೋಜನೆಯ ಫಲಶೃತಿಯಿದು).
- ಜೀವವೈವಿಧ್ಯ ನಿರ್ವಹಣಾ ಸಮಿತಿಗಳು, ಜನತಾ ಜೀವವೈವಿಧ್ಯ ದಾಖಲಾತಿ ಹಾಗೂ ನ್ಯಾಯಯುತ ಲಾಭ ಹಂಚಿಕೆ ಕುರಿತಾದ ನಿಯಮಾವಳಿಗಳ ಕುರಿತು ಕನ್ನಡದಲ್ಲಿ ಕಿರು ಹೊತ್ತಿಗೆಗಳು.

# ಸ್ಥಳಭೇಟಿ ಚಟುವಟಿಕೆಗಳ ಛಾಯಾಂಕಣ



ಮಂಡಳಿಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳು ದಿ. 11 ಮಾರ್ಚ್ 2020ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಬಳಿಯಿರುವ ನಲ್ಲೂರು ಹುಣಸೆತೋಪು ಪಾರಂಪರಿಕ ಸ್ಥಳಕ್ಕೆ ಭೇಟಿಯಿತ್ತು, ಅದರ ಸಂರಕ್ಷಣೆ ಕುರಿತು ಸಮಾಲೋಚನೆ ನಡೆಸಿದರು.



ಮಂಡಳಿಯ ಅಧ್ಯಕ್ಷರು ದಿ. 21.02.2020ರಂದು, ಕುಂದಾಪುರ ತಾಲ್ಲೂಕಿನ ವಾರಾಹಿ ನದಿ ಕಣಿವೆಯ ಪ್ರದೇಶಕ್ಕೆ ತಜ್ಞನಿಯೋಗದೊಂದಿಗೆ ಭೇಟಿಯಿತ್ತು, ನದಿತಪ್ಪಲಿನ ಜೀವವೈವಿಧ್ಯ ಸಂರಕ್ಷಣೆ ಕಾರ್ಯತಂತ್ರಗಳ ಅಧ್ಯಯನಕ್ಕೆ ಚಾಲನೆ ನೀಡಿದರು.



ಮಂಡಳಿಯ ಅಧ್ಯಕ್ಷರು ಶಿವಮೊಗ್ಗದಲ್ಲಿರುವ ಮಂಗನಕಾಯಿಲೆ ವೈರಾಣು ಪ್ರಯೋಗಾಲಯಕ್ಕೆ ಇತ್ತೀಚೆಗೆ ಭೇಟಿಯಿತ್ತು, ಮಂಗನಕಾಯಿಲೆ ನಿಯಂತ್ರಣದ ಮಾರ್ಗೋಪಾಯಗಳ ಕುರಿತು ಚರ್ಚಿಸಿದರು.

Printed Matter Book-Post

If *undelivered, please return to:*
**Karnataka Biodiversity Board**
Ground Floor, Vana Vikasa, 18th Cross
Malleshwaram, Bengaluru -560003


**Biodiversity Newsletter Publication Committee**

**Chief Patrons: Sri Anant Hegde Ashsiar,** Hon. Chairman, KBB.
**Dr. Virender Singh IFS,** PCCF & Member Secretary, KBB

**Editorial Advice:** Dr. Keshava H. Korse

**Editorial Board:**

| | |
|---|---|
| Dr. B. V. Purushotham | DD (AYUSH) |
| Mrs. Sahana Hegde | DD (Horti) |
| Mrs. Veena P.G. | Consultant (ABS) |
| Mrs. Roopa B.P | Legal Consultant |
| Ms. Ishwarya B. N. | Consultant (PBR) |
| Mr. Pritham | SRA (Zoology) |
| Mrs. Shruthi S. | T.E. (Taxonmy) |
| Mr. Prasanna K.R. | T.E. (Botany) |
| Mrs. Vijayalakshami H. | T.E. (Agri) |
| Dr. C.R. Jawahar | RA (Botany) |

With printing assistance by Sri Puttaraju S.P (EA) and all staff member of KBB.